**ಪಾಠ–7** **ಫೆಬ್ರವರಿ 6–12**

# ಅಶ್ಶೂರ್ಯರರ ಪರಾಜಯ (ಸೋಲು)



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ :** ಯೆಶಾಯ 36:1, ಯೆಶಾಯ 36:2–20, ಯೆಶಾಯ 36:21–32, ಯೆಶಾಯ 37:21–38 ಮತ್ತು ಯೆಶಾಯ 38, 39ನೇ ಅಧ್ಯಾಯಗಳು.

**ಸ್ಮರಣವಾಕ್ಯ : "ಕೆರೂಬಿಗಳ ಮೇಲೆ ಆಸೀನನಾಗಿರುವಾತನೇ, ಇಸ್ರಾಯೇಲ್ ದೇವರೇ, ಸೇನಾಧೀಶ್ವರನಾದ ಯೆಹೋವನೇ, ಎಲ್ಲಾ ಭೂರಾಜ್ಯಗಳನ್ನು ಆಳುವ ದೇವರು ನೀನೊಬ್ಬನೇ, ಪರಲೋಕ, ಭೂಲೋಕಗಳನ್ನುಂಟುಮಾಡಿದವನು ನೀನೇ"** (ಯೆಶಾಯ 37:16).

ಒಬ್ಬ ತೆಳ್ಳನೆ ಮನುಷ್ಯನು ತನ್ನ ಇಬ್ಬರು ಗಂಡುಮಕ್ಕಳ ಜೊತೆ ಬರಿಗಾಲಿನಲ್ಲಿ ನಡೆಯುತ್ತಾನೆ. ಮತ್ತೊಂದು ಕುಟುಂಬವು ತಮ್ಮ ವಸ್ತುಗಳನ್ನು ಎತ್ತಿನಗಾಡಿಯ ಮೇಲೆ ಹೇರಿಕೊಂಡು ಅದನ್ನು ಬಡಕಲು ಎತ್ತಿನಿಂದ ಎಳೆಸಿಕೊಂಡು ಹೋಗುತ್ತದೆ. ಒಬ್ಬ ಮನುಷ್ಯನು ಗಾಡಿಯನ್ನು ನಡೆಸುತ್ತಿದ್ದಾನೆ. ಇಬ್ಬರು ಹೆಂಗಸರು ಗಾಡಿಯ ಮೇಲೆ ಕುಳಿತಿದ್ದಾರೆ. ಎತ್ತಿನಗಾಡಿ ಇಲ್ಲದ ಬಡವರು ತಮ್ಮ ಹೊರೆಗಳನ್ನು ಭುಜದ ಮೇಲೆ ಹೊತ್ತುಕೊಂಡು ನಡೆಯುತ್ತಾರೆ.

"ಎಲ್ಲೆಲ್ಲೂ ಸೈನಿಕರು ತುಂಬಿಹೋಗಿದ್ದಾರೆ. ಪಟ್ಟಣದ ದೊಡ್ಡಬಾಗಿಲನ್ನು ಮರದ ದೊಡ್ಡ ದಿಮ್ಮಿಯಿಂದ ತಿವಿದುಮುರಿದುಹಾಕಿದರು, ಬಿಲ್ಲುಗಾರರು ಕೋಟೆ ಮೇಲೆ ನಿಂತುಕೊಂಡು ಅದನ್ನು ರಕ್ಷಿಸುತ್ತಿರುವ ಯೋಧರ ಕಡೆಗೆ ಬಾಣ

* ಫೆಬ್ರವರಿ 13ನೇ ಸಬ್ಬತ್ತಿಗೆ ಈ ಪಾಠವನ್ನು ಅಧ್ಯಯನ ಮಾಡಿ ಸಿದ್ಧಪಡಿಸಿಕೊಳ್ಳಿರಿ.

ಎಸೆಯುತ್ತಿದ್ದಾರೆ. ದೊಡ್ಡ ಹತ್ಯಾಕಾಂಡವು ಪರಮಾಧಿಕಾರ ನಡೆಸುತ್ತಿದೆ. "**ಥಟ್ಟನೆ ಮುಂದೆ ಸರಿಯಿತು. ಒಬ್ಬ ರಾಜನು ತನ್ನ ಸೈನಿಕರು ಸೆರೆಹಿಡಿದು ತಂದವರನ್ನು ಮತ್ತು ಕೊಳ್ಳೆಹೊಡೆದು ತಂದ ವಸ್ತುಗಳನ್ನು ಸ್ವೀಕಾರ ಮಾಡುತ್ತಾ ನಿಧಾನವಾಗಿ ತನ್ನ ಸಿಂಹಾಸನದ ಮೇಲೆ ಕುಳಿತುಕೊಳ್ಳುತ್ತಾನೆ. ಕೆಲವು ಸೆರೆಯಾಳುಗಳು ತಮ್ಮ ಕೈಗಳನ್ನು ಮೇಲೆತ್ತಿಕೊಂಡು ರಾಜನ ಸಿಂಹಾಸನದ ಕಡೆಗೆ ಆತನ ಕರುಣೆಗಾಗಿ ಬೇಡುತ್ತಾ ಬರುತ್ತಿದ್ದಾರೆ, ಇತರರು ಮಂಡಿಯೂರಿಕೊಂಡು ಅಥವಾ ತಲೆಬಾಗಿಸಿಕೊಂಡು ನಿಂತಿದ್ದಾರೆ. ಈ ದೃಶ್ಯಾವಳಿಯು ರಾಜನ ಆಸ್ಥಾನವನ್ನು ವಿವರಿಸುತ್ತಿದ್ದು ಈ ಮಾತುಗಳಿಂದ ಆರಂಭವಾಗುತ್ತಿದೆ: ಸನ್ಹೇರೀಬನು, ಭೂಲೋಕಾಧಿಪತಿ, ಅಶ್ಶೂರರ ಅರಸನು, ನೆಮೇಡು-ಸಿಂಹಾಸನಾಧೀಶ ಎಂಬ ಬಣ್ಣನೆಯ ಉಕ್ತಿಗಳು ಮತ್ತು ಲಾಕೀಷ್ ಪಟ್ಟಣದಿಂದ ಕೊಳ್ಳೆಹೊಡೆದು ತಂದ ವಸ್ತುಗಳನ್ನು ರಾಜನ ಅವಲೋಕನಕ್ಕೆ ಇಡಲಾಗಿದೆ**" – ಜಾನ್ ಮಲ್ಕಾಯ್ ರಸೆಲ್ 'The Writing on the Wall' - PP 137, 138.

ಈ ಸರಣಿ ಚಿತ್ರಪಟಗಳು ಒಂದು ಕಾಲದಲ್ಲಿ ಅಶ್ಶೂರರ ಅರಸನಾದ 'ಸನ್ಹೇರೀಬನ' "ಎದುರಾಳಿ ಇಲ್ಲದ ಅರಮನೆ" ಎಂದು ಪ್ರಸಿದ್ಧವಾದ ಆತನ ಅರಮನೆಯ ಗೋಡೆಗಳನ್ನು ಅಲಂಕರಿಸಿದ್ದವು, ಈವಾಗ ಬ್ರಿಟಿಷ್ ವಸ್ತು ಸಂಗ್ರಹಾಲಯದಲ್ಲಿವೆ. ದೇವಜನರು ಎಂಥಾ ಪರಿಸ್ಥಿತಿಗೆ ಬಂದರು ಎಂಬುದರ ಬಗ್ಗೆ ಈ ಚಿತ್ರಪಟಗಳು ಹೇಳುವ ಕಥೆಯೇನು ತಿಳಿಯೋಣ!

**ಭಾನುವಾರ** **ಫೆಬ್ರವರಿ 7**

## ಪೋಣಿಸಲ್ಪಟ್ಟ ಮಾಲೆ (ಯೆಶಾಯ 36:1)

ಯಹೂದಕ್ಕೆ ಏನು ಘಟಿಸಿತು? (2 ಅರಸುಗಳು 18:13, 2 ಪೂ.ವೃ.32:1 ಮತ್ತು ಯೆಶಾಯ 36:1).

ದೇವರನ್ನು ನಂಬದೆ ಹೋದ ಆಹಾಜನು ಮರಣಹೊಂದಿದ ಮೇಲೆ ಅವನ ಮಗನಾದ ಹಿಜ್ಕೀಯನು ಸಿಂಹಾಸನವನ್ನು ಏರಿದನು. ಹಿಜ್ಕೀಯನು ನಂಬಿಗಸ್ತನಾಗಿದ್ದನು. ಯೆಹೂದವು ಅವನು ರಾಜನಾದಾಗ ತನ್ನ ಸಂಪೂರ್ಣವಾದ ಸ್ವಾತಂತ್ರ್ಯವನ್ನು ಕಳೆದುಕೊಂಡಿತ್ತು. ಅಹಾಜನು ಸಿರಿಯ ಮತ್ತು

ಇಸ್ರಾಯೇಲರಾಜರ ವಿರುದ್ಧ ಹೋರಾಡುವುದಕ್ಕೆ ಅಶ್ಶೂರರಾಜನ ಸಹಾಯ ಪಡೆದುಕೊಂಡಾಗ ಅಶ್ಶೂರ ರಾಜನಿಗೆ ಅಹಾಜನು ಕಪ್ಪಕಾಣಿಕೆಗಳನ್ನು ಸಲ್ಲಿಸುತ್ತಿದ್ದನು (2 ಪೂ.ವೃ.28:16–21 ವಚನಗಳನ್ನು ನೋಡಿರಿ). ಅಶ್ಶೂರರ ಅರಸನಾದ ಇವ್ಮಡಿ ಸರ್ಗಾನನು (Sargon-II) ದೂರದಲ್ಲಿದ್ದ ಯುದ್ಧಭೂಮಿಯಲ್ಲಿ ಮಡಿದನು ಇವನ ನಂತರ ಸನ್ಹೇರೀಬನು ಕ್ರಿ.ಪೂ.705ರಲ್ಲಿ ಸಿಂಹಾಸನವನ್ನೇರಿದನು. ಆವಾಗ ಅಶ್ಶೂರವು ಅಪಾಯದಲ್ಲಿ ಸಿಕ್ಕಿಕೊಂಡಂತೆ ಕಾಣಿಸಿತು. ಈ ಸಂದರ್ಭವನ್ನು ಉಪಯೋಗಿಸಿಕೊಂಡು ಸುತ್ತಮುತ್ತಲಿನ ರಾಜರುಗಳನ್ನು ಸೇರಿಸಿಕೊಂಡು ಅಶ್ಶೂರರ ವಿರುದ್ಧವಾಗಿ ನಿಲ್ಲಲು ಹಿಜ್ಕೀಯನು ಪ್ರಯತ್ನಪಟ್ಟಿದ್ದಕ್ಕೆ ಸತ್ಯವೇದ ವಚನಗಳು ಮತ್ತು ಅಶ್ಶೂರರ ಚರಿತ್ರೆಯು ನಮಗೆ ಸಾಕಷ್ಟು ಪುರಾವೆಗಳನ್ನು ನೀಡುತ್ತವೆ (2 ಅರಸುಗಳು 18:7).

ದೌರ್ಭಾಗ್ಯವೇನೆಂದರೆ ಹಿಜ್ಕೀಯನು ಅಶ್ಶೂರರ ವಿರುದ್ಧ ಪುಟಿದೇಳುವ ಮಹಾಸಾಮರ್ಥ್ಯದ ಬಗ್ಗೆ ಸರಿಯಾಗಿ ಅಂದಾಜುಮಾಡಿರಲಿಲ್ಲ. ಕ್ರಿ.ಪೂ.701ರಲ್ಲಿ ಸನ್ಹೇರೀಬನು ತನ್ನ ಸಾಮ್ರಾಜ್ಯದ ಇತರೆ ಪ್ರಾಂತ್ಯಗಳನ್ನು ತನ್ನ ವಶಕ್ಕೆ ತೆಗೆದುಕೊಂಡು ಸಿರಿಯಾಪ್ಯಾಲೆಸ್ತಾನ್ ವಿರುದ್ಧ ನಿಂತು ಅವರನ್ನು ಸದೆಬಡಿದು ಯಹೂದವನ್ನು ಕೊಳ್ಳೆಹೊಡೆದನು.

ಅಶ್ಶೂರರ ವಿರುದ್ಧ ಮುಖಾಮುಖಿಯಾಗಿ ಹೋರಾಡಲು ಹಿಜ್ಕೀಯನು ಹೇಗೆ ಸಿದ್ಧಪಡಿಸಿಕೊಂಡನು? (2 ಪೂ.ವೃ.32:1–8).

ಸನ್ಹೇರೀಬನು ಯಹೂದದ ರಾಜಧಾನಿ ಯೆರೂಸಲೇಮನ್ನು ತನ್ನ ವಶಕ್ಕೆ ತೆಗೆದುಕೊಳ್ಳಲು ಪ್ರಯತ್ನ ನಡೆಸಿದಾಗ ಹಿಜ್ಕೀಯನು ಅವನನ್ನು ಎದುರಿಸಲು ವ್ಯಾಪಕವಾದ ಸಿದ್ಧತೆಗಳನ್ನು ನಡೆಸಿದನು. ಆತನು ತನ್ನ ರಾಜ್ಯದ ಕೋಟೆಕೊತ್ತಲುಗಳನ್ನು ಭದ್ರಪಡಿಸಿಕೊಂಡು ತನ್ನ ಸೈನ್ಯವನ್ನು ಸಂಘಟಿಸಿ ಇನ್ನೂ ಹೆಚ್ಚಾಗಿ ಸಜ್ಜುಗೊಳಿಸಿದನು ಮತ್ತು ಯೆರೂಸಲೇಮಿನ ನೀರು ಸರಬರಾಜನ್ನು ಹೆಚ್ಚಿಸಿ ಅದಕ್ಕೆ ಸಾಕಷ್ಟ ಭದ್ರತೆ ನೀಡಿದನು (2 ಅರಸುಗಳು 20:20 ಮತ್ತು 2 ಪೂ.ವೃ.32:30ನ್ನೂ ಸಹಾ ನೋಡಿರಿ). ಈ ಮುತ್ತಿಗೆ ಸಮಯದಲ್ಲಿ ಹಿಜ್ಕೀಯನು ಮಹತ್ತರವಾದ ಸಿಲೋಮ್ ನೀರಿನ ಸುರಂಗವನ್ನು ಮಾಡಿ ಅದನ್ನು ಹೇಗೆ ನಿರ್ಮಿಸಲಾಯ್ತು ಎಂಬುದನ್ನು ಸ್ಮರಣೆಗಾಗಿ ಶಾಸನ ಕೆತ್ತಿಸಿದ್ದಾನೆ.

ಈ ಹೋರಾಟದ ಸಮಯದಲ್ಲಿ ಸೈನ್ಯದ ಮತ್ತು ರಾಜ್ಯಾಡಳಿತದ ನಾಯಕತ್ವದಂತೆಯೇ ಜನರ ನೈತಿಕ ಬಲವನ್ನು ಹೆಚ್ಚಿಸಲು ಆತ್ಮೀಕನಾಯಕತ್ವವು ಬಹಳ ಮುಖ್ಯವಾದುದೆಂದು ಪರಿಗಣಿಸಿ ಅದನ್ನು ಒದಗಿಸಿಕೊಟ್ಟನು. "ಆದರೆ ರಾಜನು ಇದನ್ನು ಶತ್ರುವನ್ನು ಎದುರಿಸುವ ಸಲುವಾಗಿ (ವಿರುದ್ಧ ಪ್ರತಿಭಟಿಸಲು) ಹೀಗೆ ಮಾಡಿದನು. ಹಿಜ್ಕೀಯನು ಮನುಷ್ಯ ಜಾಣ್ಮೆಯು ಮತ್ತು ಶಕ್ತಿಯು ಸಾಧಿಸಬಹುದಾದುದನ್ನು ಸಾಧಿಸಲು ತನ್ನ ರಾಜ್ಯದ ಎಲ್ಲಾ ಸಾಮರ್ಥ್ಯವನ್ನು ಒಟ್ಟುಗೂಡಿಸಿಕೊಂಡು ಪ್ರಜೆಗಳು ಒಳ್ಳೆಯ ಧೈರ್ಯ ಹೊಂದುವಂತೆ ಅವರನ್ನು ಹುರಿದುಂಬಿಸಿದನು"– ಎಲೆನ್ ಜಿ ವೈಟಮ್ಮನವರ "**ಪ್ರವಾದಿಗಳು ಮತ್ತು ಅರಸರು**" ಪುಸ್ತಕದಲ್ಲಿ 351ನೇ ಪುಟ.

ಹಿಜ್ಕೀಯನು ದೇವರಲ್ಲಿ ಬಹಳವಾಗಿ ಭರವಸವಿಟ್ಟು ಮೇಲೆ ಆತನು ಯಾಕೆ ಸ್ವಂತ ಪರಿಶ್ರಮವನ್ನು ಅಷ್ಟರಮಟ್ಟಿಗೆ ಹಾಕಿದನು? ಆತನ ಕ್ರಿಯೆಗಳು ಅವನ ನಂಬಿಕೆಯನ್ನು ನಿಷ್ಫಲಗೊಳಿಸುತ್ತವೆಯೆ? ಫಿಲಿಪ್ಪಿ 2:12,13ನೇ ವಚನಗಳನ್ನು ನೋಡಿರಿ. ದೇವರು ನಿಜವಾಗಿಯೂ ಸಫಲವಾಗುವ ಬಲವನ್ನು ನೀಡುವುದರಿಂದ ನಾವು ಅವನೊಡನೆ ಸಹಕರಿಸಬೇಕು.

**ಸೋಮವಾರ** **ಫೆಬ್ರವರಿ 8**

## ಅಪಪ್ರಚಾರ (ಯೆಶಾಯ 36:2–20)

ಅಶ್ಶೂರದ ಅರಸರು ಕ್ರೂರರು ಮಾತ್ರವಲ್ಲದೆ ಬುದ್ಧಿವಂತರೂ ಆಗಿದ್ದರು. ಅವರ ಗುರಿಯು ಐಶ್ವರ್ಯ ಮತ್ತು ಅಧಿಕಾರವಾಗಿತ್ತು ವಿನಹ ಕೇವಲ ನಾಶಪಡಿಸುವುದಲ್ಲ (ಯೆಶಾಯ 10:13,14ನ್ನು ಹೋಲಿಸಿ ನೋಡಿರಿ). ಒಂದು ನಗರದ ಜನರನ್ನು ಮನವೊಲಿಸಿ ಅವರನ್ನು ವಶಪಡಿಸಿಕೊಳ್ಳುವುದಾದರೆ ಅದನ್ನು ಶರಣಾಗಿಸಲು ಸೈನ್ಯದ ಬಲವನ್ನು ಯಾಕೆ ಉಪಯೋಗಿಸಬೇಕು? ಆದುದರಿಂದ ಸನ್ಹೇರೀಬನು ಲಾಕೀಷ್ ನಗರದ ಮುತ್ತಿಗೆಯಲ್ಲಿ ತೊಡಗಿಕೊಂಡಿದ್ದಾಗ ಯೆರೂಸಲೇಮನ್ನು ಅಪಪ್ರಚಾರದ ಮೂಲಕ ವಶಪಡಿಸಿಕೊಳ್ಳಲು ಅದರ ಪ್ರಜೆಗಳನ್ನು ಮನವೊಲಿಸಲು ತನ್ನ ಸೈನ್ಯಾಧಿಕಾರಿಯಾದ ರಬ್ಷಾಕೆಯನ್ನು ಹಿಜ್ಕೀಯನ ಹತ್ತಿರ ಕಳುಹಿಸಿದನು.

ಯಹೂದದ ಮೇಲೆ ಬೆದರಿಕೆ ಹಾಕಲು ರಬ್ಷಾಕೆಯು ಯಾವ ವಾದವನ್ನು ಉಪಯೋಗಿಸಿದನು? (ಯೆಶಾಯ 36:2–20 ಮತ್ತು 2 ಅರ 18:17–35 ಮತ್ತು 2 ಪೂ.ವೃ. 32:9–19ನ್ನು ಹೋಲಿಸಿರಿ).

ಇಲ್ಲಿ ರಬ್ಷಾಕೆಯು ಕೆಲವು ಬಲಯುತವಾದ ವಾದಗಳನ್ನು ಮಾಡಿದ್ದಾನೆ. ಐಗುಪ್ತದೇಶವು ಬಲಹೀನವಾಗಿರುವುದರಿಂದ ಮತ್ತು ನಂಬಿಕೆಗೆ ಯೋಗ್ಯವಲ್ಲದ ಕಾರಣ ಅದರ ಮೇಲೆ ಭರವಸವಿಡುವುದಕ್ಕಾಗುವುದಿಲ್ಲ. ರಾಜ್ಯದ ಅನೇಕ ಯಜ್ಞವೇದಿಗಳನ್ನು, ಬಲಿಪೀಠಗಳನ್ನು ಹಿಜ್ಕೀಯನು ನಾಶಪಡಿಸಿರುವುದರಿಂದ ಯೆಹೋವನು ಕುಪಿತನಾಗಿದ್ದಾನೆ ಮತ್ತು ಆತನು ದಿಟವಾಗಿಯೂ ಸನ್ಹೇರೀಬನ ಪಕ್ಷದಲ್ಲಿದ್ದು ಯೆಹೂದವನ್ನು ನಾಶಪಡಿಸಲು ಅನುಮತಿ ಕೊಟ್ಟಿದ್ದಾನೆ ಎಂದು ಪೌಳಿಗೋಡೆಯ ಮೇಲಿದ್ದ ಜನರಿಗೆ ಸಾರಿ ಹೇಳುತ್ತಾನೆ.

ಹಿಜ್ಕೀಯನು ತರಬೇತಿ ಹೊಂದಿದ 2000 ಕುದುರೆ ಸವಾರರನ್ನು ಸಹಾ ಹೊಂದಿಲ್ಲ. ಹೀಗಿರುವುದರಿಂದ ನಿಮ್ಮ ರಾಜನು ನಮ್ಮ ಮೇಲೆ ಯುದ್ಧ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತಾನೆ.

ನಾವು ಪಟ್ಟಣವನ್ನು ಮುತ್ತಿಗೆ ಹಾಕಿದಾಗ ನಿಮಗೆ ತಿನ್ನುವುದಕ್ಕೆ ಮತ್ತು ಕುಡಿಯುವುದಕ್ಕೆ ಬೇಕಾದುದನ್ನು ರಾಜನು ಕೊಡಲಾರನು ನಿಮ್ಮನ್ನು ಆತನು ರಕ್ಷಿಸಲಾರನು ಯಾಕೆಂದರೆ ಅಶ್ಶೂರರು ವಶಪಡಿಸಿಕೊಂಡ ದೇಶಗಳನ್ನು ಅವರ ದೇವತೆಗಳು ರಕ್ಷಿಸಲಿಲ್ಲ ಹಾಗೆಯೇ ನಿಮ್ಮ ದೇವರಾದ ಯೆಹೋವನು ಸಹಾ ನಿಮ್ಮನ್ನು ರಕ್ಷಿಸಲಾರನು ಎಂದು ಜನರ ಮನವೊಲಿಸಲು ರಬ್ಷಾಕೆಯು ಪ್ರಯತ್ನಪಟ್ಟನು.

**ರಬ್ಷಾಕೆಯು ಸತ್ಯವನ್ನು ಹೇಳುತ್ತಿದ್ದಾನೆಯೆ?**

ಆತನ ಮಾತುಗಳಲ್ಲಿ ಸಾಕಷ್ಟು ಸತ್ಯವಿದ್ದುದರಿಂದ ಆತನ ವಾದವು ಜನರನ್ನು ಪ್ರೇರಿಸುವಂಥದ್ದಾಗಿತ್ತು. ಅಲ್ಲದೆ ಅವನು ಹೇಳದ ಎರಡು ವಿಷಯಗಳು ಅವನನ್ನು ಬೆಂಬಲಿಸುತ್ತಿದ್ದವು.

ಮೊದಲನೆಯದು ಕೇವಲ 30 ಮೈಲುಗಳ ದೂರದಲ್ಲಿದ್ದ ಲಾಕೀಷ್ ಪಟ್ಟಣವನ್ನು ಅಶ್ಶೂರರು ಮುತ್ತಿಗೆ ಹಾಕಿ ವಶಪಡಿಸಿಕೊಂಡಿದ್ದರು. ರಬ್ಷಾಕೆಯು

ಅಲ್ಲಿಂದಲೇ ಯೆರೂಸಲೇಮಿಗೆ ಬಂದಿದ್ದನು. ಲಾಕೀಷ್ ಪಟ್ಟಣವು ಬಲಯುತ ಕೋಟೆ ಹೊಂದಿದ್ದಾಗ್ಯೂ ಅಶ್ಶೂರರ ಕೈವಶವಾಗಿತ್ತು ಮತ್ತು ರಬ್ಷಾಕೆಯು ಅಶ್ಶೂರದ ಮಹಾಸೈನ್ಯದೊಡನೆ ಯೆರೂಸಲೇಮಿಗೆ ಬಂದಿದ್ದನು (ಯೆಶಾಯ 36:2). ಅಶ್ಶೂರ ಸೈನ್ಯವನ್ನು ಎದುರಿಸಿದ ಇತರೆ ಸೈನ್ಯಗಳ ಮತ್ತು ನಗರಗಳ ಗತಿ ಏನಾಯ್ತೆಂಬುದನ್ನು ತಿಳಿದು ಯೆರೂಸಲೇಮಿಗೂ ಅದೇ ಗತಿಯಾಗುತ್ತದೆ ಎಂದು ಮನುಷ್ಯ ದೃಷ್ಟಿಯಿಂದ ಸಂದೇಹಪಡದಿರುವುದಕ್ಕೆ ಯಾವ ಕಾರಣವೂ ಇಲ್ಲ (2 ಅರಸುಗಳು 18:9,10) (ಇದನ್ನು ಯೆಶಾಯ 10:8–11 ವಚನಗಳೊಂದಿಗೆ ಹೋಲಿಸಿರಿ). ಹಿಜ್ಕೀಯನು ಯೆರೂಸಲೇಮಿನಲ್ಲಿಯೇ ಎಲ್ಲರೂ ಯಜ್ಞವನ್ನು ಸಮರ್ಪಿಸುವಂತೆ ಮಾಡಲು ಬೇರೆ ಬೇರೆ ಸ್ಥಳಗಳಲ್ಲಿದ್ದ ಎಲ್ಲಾ ಯಜ್ಞವೇದಿಗಳನ್ನು ಕೆಡವಿಹಾಕಿದ್ದನು (2 ಅರಸುಗಳು 18:4 ಮತ್ತು 2 ಪೂ.ವೃ. 31:1). ಆದುದರಿಂದ ಯಹೋವನು ಅವನಿಗೆ ಸಹಾಯ ಮಾಡುವುದಿಲ್ಲವೆಂದು ರಬ್ಷಾಕೆಯು ಹೇಳುತ್ತಿದ್ದದು ಧಾರ್ಮಿಕ ಸುಧಾರಣೆಯು ಕರ್ತನನ್ನು ರೇಗಿಸಿದ್ದ ಪಕ್ಷದಲ್ಲಿ ಜನರ ಪಾಲಿಗಿದ್ದ ಆ ಒಂದು ನಿರೀಕ್ಷೆಯು ಇಲ್ಲವಾಗಿತ್ತು ಅಲ್ಲವೇ? ಆದುದರಿಂದ ಹಿಜ್ಕೀಯನಿಂದ ಜನರು ರಕ್ಷಿಸಲ್ಪಡುತ್ತಿದ್ದರೇ ಅಥವಾ ಅವನಿಂದ ರಕ್ಷಿಸುವುದಕ್ಕೆ ಸಾಧ್ಯವಿತ್ತೆ ಎಂಬ ಪ್ರಶ್ನೆಗಳಿಗೆ ದೇವರು ತಾನೆ ಉತ್ತರವನ್ನು ಕೊಡಬೇಕಾಗಿತ್ತು!

ಎಲ್ಲಾ ಸಾಧ್ಯತೆಗಳೂ ಅಳಿದು ಹೋದವು ಎಂದು ಮಾನವ ದೃಷ್ಟಿಯಿಂದ ಹೇಳುವ ಪರಿಸ್ಥಿತಿಗೆ ನೀವು ಯಾವಾಗಲೂ ಸಿಲುಕಿಹಾಕಿಕೊಂಡಿದ್ದೀರಾ? ನಿಮಗಿರುವ ಒಂದೇ ಒಂದು ಸಹಾಯ ಯಾವುದು? ನೀವು ಇಷ್ಟಪಟ್ಟರೆ ಅಂತಹ ಒಂದು ಪರಿಸ್ಥಿತಿಯನ್ನು ನೀನು ಹೇಗೆ ನಿಭಾಯಿಸಿದಿರಿ ಎಂಬ ನಿಮ್ಮ ಅನುಭವವನ್ನು ತರಗತಿಯಲ್ಲಿ ಹಂಚಿಕೊಳ್ಳಲು ಸಿದ್ಧವಾಗಿರಿ.

**ಮಂಗಳವಾರ** **ಫೆಬ್ರವರಿ 9**

## ಆತನು ನಡುಗಿಹೋದನು ಆದರೆ ದೇವರು ಅವನ ಕೈಬಿಡಲಿಲ್ಲ (ಯೆಶಾಯ 36:21–37)

ರಬ್ಷಾಕೆಯ ಜಾಣತನದ ಮಾತುಗಾರಿಕೆ ಹಿಜ್ಕೀಯನ ಮತ್ತು ಆತನ ಅಧಿಕಾರಿಗಳ ಮೇಲೆ ಹೇಗೆ ಪರಿಣಾಮ ಬೀರಿದವು? (2 ಅರಸುಗಳು 18:37–19:4 ಮತ್ತು ಯೆಶಾಯ 36:21–37:4).

ರಬ್ಷಾಕೆಯ ಮಾತುಗಳನ್ನು ಕೇಳಿ ಹಿಜ್ಕೀಯನು ಬಹಳವಾಗಿ ತತ್ತರಗೊಂಡನು ಮತ್ತು ದುಃಖದಿಂದ ರೋದಿಸಿದನು.

ಯಾವ ಪ್ರವಾದಿಯ ಸಲಹೆಗಳು ತನ್ನ ತಂದೆಯಿಂದ ಉಪೇಕ್ಷಿಸಲ್ಪಟ್ಟವೋ ಅದೇ ಪ್ರವಾದಿಯಾದ ಯೆಶಾಯನ ಮಧ್ಯಸ್ಥಿಕೆಯನ್ನು ಬಯಸುವವನಾಗಿ ಹಿಜ್ಕೀಯನು ದೇವರ ಕಡೆಗೆ ತಿರುಗಿದನು.

ಸಂದೇಶವು ಸಂಕ್ಷಿಪ್ತವಾಗಿದ್ದರೂ ಸಾಕಷ್ಟು ಮಾಹಿತಿಯನ್ನು ಹೊಂದಿತ್ತು. ದೇವರು ತನ್ನ ಜನರ ಪಕ್ಷವಾಗಿದ್ದನು. ಯೆಶಾಯನು ಅಶ್ಶೂರರಾಜನಾದ ಸನ್ಹೇರೀಬನು ಯಹೂದವನ್ನು ಆಕ್ರಮಣ ಮಾಡದೆ ಹಿಂದಿರುಗಿ ಹೋಗುವವಂತೆ ಮಾಡುವಂತಹ ವದಂತಿಯನ್ನು ಕೇಳಿ ಅವನಿಗೆ ತಲ್ಲಣವಾಗುತ್ತದೆಯೆಂದು ಯೆಶಾಯನು ಭವಿಷ್ಯವನ್ನು ನುಡಿದಿದ್ದನು. ಇದು ಕೂಡಲೇ ನೆರವೇರಿತು.

ತಾತ್ಕಾಲಿಕವಾಗಿ ಬೇಸರಗೊಂಡಾಗ್ಯೂ ದೀರ್ಘ ಸಮಯ ಅದಕ್ಕೆ ಅವಕಾಶ ಕೊಡದೆ ಸನ್ಹೇರೀಬನು ಹಿಜ್ಕೀಯನಿಗೆ ಒಂದು ಬೆದರಿಕೆಯ ಸಂದೇಶವನ್ನು ಕಳುಹಿಸಿದನು: "ಯೆರೂಸಲೇಮನ್ನು ಅಶ್ಶೂರರ ರಾಜನ ಕೈಗೆ ಕೊಡುವುದಿಲ್ಲವೆಂದು ಹೇಳಿದ ನಿನ್ನ ದೇವರ ವಾಗ್ದಾನದಿಂದ ನಿನ್ನನ್ನು ನೀನು ಮೋಸಪಡಿಸಿಕೊಳ್ಳಬೇಡ. ಇತರ ಜನಾಂಗದ ದೇವತೆಗಳು ಅವರನ್ನು ನನ್ನ ಕೈಯಿಂದ ಬಿಡಿಸಲಿಲ್ಲ ಅಲ್ಲವೇ?" (ಯೆಶಾಯ 37:10,12 ಮತ್ತು 2 ಪೂ.ವೃ. 32:17ನ್ನು ಸಹಾ ನೋಡಿರಿ).

ಈವಾಗ ಹಿಜ್ಕೀಯನು ನೇರವಾಗಿ ಆಲಯಕ್ಕೆ ಹೋಗಿ ಆ ಸಂದೇಶವನ್ನು ಕೆರೂಬಿಯರ ನಡುವೆ ಆಸೀನನಾಗಿರುವ ಸೇನಾಧೀಶ್ವರನಾದ ಯೆಹೋವನ ಮುಂದೆ ಇಟ್ಟನು (ಯೆಶಾಯ 37:14–16).

ಯೆರೂಸಲೇಮ್ ಪಟ್ಟಣದ ಬಿಕ್ಕಟ್ಟಿನಲ್ಲಿ ಯಾವ ಅಪಾಯವನ್ನು ಹಿಜ್ಕೀಯನ ಪ್ರಾರ್ಥನೆಯಲ್ಲಿ ಹೇಗೆ ಗುರಿತಿಸಬಹುದು? (ಯೆಶಾಯ 37:15–20).

ಸೆನ್ಹೇರೀಬನು ಹಿಜ್ಕೀಯನ ಬಲವಾದ ರಕ್ಷಣೆಯಾಗಿದ್ದ ಆತನ ದೇವರ ನಂಬಿಕೆಯ ಮೇಲೆ ಬಹಳ ಬಲವನ್ನು ಕೇಂದ್ರೀಕರಿಸಿ ಆಕ್ರಮಣ ಮಾಡಿದನು. ಅವನ ಆಕ್ರಮಣಕ್ಕೆ ಮಣಿಯದೆ ಹಿಜ್ಕೀಯನು ಯೆಹೋವನಿಗೆ ತಾನು ಯಾರೆಂಬುದನ್ನು ಸನ್ಹೇರೀಬನಿಗೆ ತೋರಿಸಬೇಕೆಂದು ಬಿನ್ನೈಸಿದನು.

**"ನಮ್ಮ ದೇವರೇ, ನೀನೆ ಅದ್ವಿತೀಯನಾದ ಯೆಹೋವನೆಂಬುದನ್ನು ಭೂರಾಜ್ಯಗಳೆಲ್ಲವೂ ತಿಳಿದುಕೊಳ್ಳುವಂತೆ ನಮ್ಮನ್ನು ಇವರ ಕೈಯಿಂದ ಬಿಡಿಸು ಎಂದು ಪ್ರಾರ್ಥಿಸಿದನು"** (ಯೆಶಾಯ 37:20).

ಹಿಜ್ಕೀಯನು ಪ್ರಾರ್ಥನೆಯನ್ನು ಪ್ರಾರ್ಥನಪೂರ್ವಕವಾಗಿ ಓದಿರಿ (ಯೆಶಾಯ 37:15–20). ದೇವರ ಯಾವ ಗುಣಗಳ ಮೇಲೆ ಆತನು ತನ್ನ ಗಮನವನ್ನು ಕೇಂದ್ರೀಕರಿಸುತ್ತಾನೆ?

ನಾವು ನಮ್ಮ ಸ್ವಂತ ಬಿಕ್ಕಟ್ಟಿನಲ್ಲಿರುವಾಗ ನಾವು ನಂಬಿಗಸ್ತರಾಗಿ ಬಲಹೊಂದಿಕೊಳ್ಳುವಂತೆ ಈ ಪ್ರಾರ್ಥನೆಯಲ್ಲಿ ನಮ್ಮನ್ನು ಧೈರ್ಯಪಡಿಸುವ ಯಾವ ನಿಯಮವನ್ನು ನಾವು ಕಾಣುತ್ತೇವೆ?

**ಬುಧವಾರ** **ಫೆಬ್ರವರಿ 10**

## ಕಥೆಯ ಉಳಿದ ಭಾಗ (ಯೆಶಾಯ 37:21–28)

ಸನ್ಹೇರೀಬನು ತನ್ನ ಕಾಲಾನುಕ್ರಮ ಇತಿಹಾಸದಲ್ಲಿ ಬರೆಸಿರುವ ಪ್ರಕಾರ ಆತನು 46 ಕೋಟೆ ಕೊತ್ತಲುಗಳುಳ್ಳ ಪಟ್ಟಣವನ್ನು ವಶಪಡಿಸಿಕೊಂಡನು ಯೆರೂಸಲೇಮನ್ನು ಮುತ್ತಿಗೆ ಹಾಕಿ ಹಿಜ್ಕೀಯನು ತನ್ನ ಅರಮನೆಯಲ್ಲಿ ಸೆರೆಯಾಳಾಗಿರುವಂತೆ ಪಂಜರದಲ್ಲಿರುವ ಪಕ್ಷಿಯಂತೆ ಬಂಧನದಲ್ಲಿಟ್ಟನು. James B. Prichard Ancient ರವರ Near Eastern Texts Reading to the Old Testament ಪುಟ 288.

ತನ್ನ ನಾನತ್ವಕ್ಕೆ ಹೆಸರುವಾಸಿಯಾದ ಸನ್ಹೇರೀಬನು ಅದರ ವಿಸ್ತರಣೆಗಾಗಿ ಎಂಬಂತೆ ಪ್ರಚಾರ ಪ್ರಿಯನಾಗಿದ್ದರೂ ಯೆರೂಸಲೇಮನ್ನು ತಾನು ವಶಪಡಿಸಿಕೊಂಡೆನೆಂಬುದಾಗಿ ಯಾವುದೇ ಪುಸ್ತಕದಲ್ಲಿಯಾಗಲೀ ಚಿತ್ರಪಟದಲ್ಲಾಗಲೀ ಹೇಳಿಕೊಂಡಿಲ್ಲ. ಮಾನವ ದೃಷ್ಟಿಯಿಂದ ನೋಡವುದಾದರೆ ಈ ವಿಷಯವು ಎಲ್ಲೂ ಉಲ್ಲೇಖವಾಗದೆ ಬಿಡಲ್ಪಟ್ಟಿರುವುದು ಬಹಳ ಆಶ್ಚರ್ಯಕರವಾಗಿದೆ.

ಸನ್ಹೇರೀಬನ ಕಠೋರವಾದ ಅಧಿಕಾರ, ಆ ಅಧಿಕಾರದ ವಿರುದ್ಧ ನಿಂತವರು ಹೆಚ್ಚು ದಿನಗಳು ಬದುಕುಳಿಯುವ ನಿರೀಕ್ಷೆಯಿಲ್ಲ, ಬದಲಾಗಿ ಘೋರಮರಣ.

ಮಾನವ ದೃಷ್ಟಿಯಿಂದ ನೋಡುವುದಾದರೆ ಈ ವಿಷಯವು ಎಲ್ಲೂ ಉಲ್ಲೇಖವಾಗದೆ ಬಿಡಲ್ಪಟ್ಟಿರುವುದು ಬಹಳ ಆಶ್ಚರ್ಯಕರವಾಗಿದೆ.

ಸತ್ಯವೇದದಲ್ಲಿ ಈ ವಿಷಯದ ಉಲ್ಲೇಖವಿಲ್ಲದಿದ್ದರೂ ನಾವು ಈ ಅದ್ಭುತವು ನಡೆದಿರಬೇಕೆಂದು ಬಲವಂತವಾಗಿಯಾದರೂ ಒಪ್ಪಿಕೊಳ್ಳಬೇಕಾಗುತ್ತದೆಯೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಸನ್ಹೇರೀಬನು ತನ್ನ ಅರಮನೆಯಾದ "ಎದುರಾಳಿಯಿಲ್ಲದ ಅರಮನೆ"ಯ ಗೋಡೆಗಳ ಮೇಲೆ ಕೆತ್ತಿರುವ ಚಿತ್ರಗಳಲ್ಲಿ ತನ್ನ ಮುಖಭಂಗವಾಗಬಾರದೆಂಬ ಉದ್ದೇಶದಿಂದ ಲಾಕೀಷ್‌ನನ್ನು ಮುತ್ತಿಗೆ ಹಾಕಿ ಗೆದ್ದ ದೃಶ್ಯವನ್ನು ಸ್ಫುಟವಾಗಿ ಗೋಡೆಯ ಮೇಲೆ ಕೆತ್ತಿಸಿರುವುದಾಗಿ ಕಾಣಿಸುತ್ತದೆ. ಇದರ ಬದಲಾಗಿ ದೇವರ ಕೃಪೆಯಿಂದ ಈ ಚಿತ್ರಪಟಗಳಲ್ಲಿ ಯೆರೂಸಲೇಮನ್ನು ತೋರಿಸಬಹುದಾಗಿತ್ತು! ಉಳಿದ ಕಥಾ ಭಾಗವನ್ನು ಸನ್ಹೇರೀಬನು ಹೇಳುವುದಿಲ್ಲ ಆದರೆ ಸತ್ಯವೇದವು ಹೇಳುತ್ತದೆ.

**ಕಥೆಯ ಉಳಿದ ಭಾಗವಾದರೂ ಏನು?** (ಯೆಶಾಯ 37:21–37)

ಪೂರ್ಣನಂಬಿಕೆಯಿಂದ ಮಾಡಿದ ಹಿಜ್ಕೀಯನ ಪ್ರಾರ್ಥನೆಗೆ ಪ್ರತಿಯಾಗಿ ರಾಜಾಧಿರಾಜನಾದ ದೇವರಿಗೆ ವಿರೋಧವಾಗಿ ನಿಂತ ಗರ್ವಿಷ್ಠರಾಜನ ಮೇಲೆ ರೋಷದಿಂದ ಕುದಿಯುತ್ತಿರುವ ಯೆಹೂದದ ಪರವಾಗಿ ಪೂರ್ಣಭರವಸೆಯುಳ್ಳ ಸಂದೇಶವನ್ನು ದೇವರು ಕಳುಹಿಸಿದನು (ಯೆಶಾಯ 37:23). ದೇವರು ದಿಟವಾಗಿಯೂ ಯೆರೂಸಲೇಮನ್ನು ಸಂರಕ್ಷಿಸುವ ಆತನ ವಾಗ್ದಾನವನ್ನು ನೆರವೇರಿಸಿದನು (2 ಅರಸುಗಳು 19:35–37, 2 ಪೂ.ವೃ. 32:21,22 ಮತ್ತು ಯೆಶಾಯ 37:36–38).

ದೊಡ್ಡ ಬಿಕ್ಕಟ್ಟನ್ನು ದೊಡ್ಡ ಅದ್ಭುತವೇ ಪರಿಹರಿಸಬೇಕು. ದೊಡ್ಡ ಬಿಕ್ಕಟ್ಟನ್ನು ಪರಿಹರಿಸುವುದಕ್ಕೆ ದೊಡ್ಡ ಅದ್ಭುತವೇ ಜರುಗಬೇಕಿತ್ತು. ದೊಡ್ಡದೇ ಜರುಗಿತು. ಯುದ್ಧದಲ್ಲಿ ಸಂಹಾರವಾದವರ ಸಂಖ್ಯೆ 1,85,000 (ಒಂದು ಲಕ್ಷದ ಎಂಬತ್ತೈದು ಸಾವಿರ)ವಾಗಿತ್ತು. ಆದುದರಿಂದ ಸನ್ಹೇರಿಬನಿಗೆ ಬೇರೇ ದಾರಿ ಕಾಣದೆ ಅವನು ತನ್ನ ಮನೆಗೆ ಹಿಂದಿರುಗಬೇಕಾಯಿತು. ಅಲ್ಲಿ ಆತನು ತನ್ನ ಮರಣವನ್ನು ಕಂಡನು.

ಯೆಶಾಯನು ನುಡಿದ ಪ್ರವಾದನೆಯನ್ನು ನೋಡಿರಿ (ಯೆಶಾಯ 37:7–38).

ಯೆಹೂದ್ಯರ ದೇವರು ಗರ್ವಿಷ್ಠ ಅಶ್ಶೂರ ರಾಜನ ಮೇಲೆ ಜಯಸಾಧಿಸಿದುದು. ಯೆಹೋವನ ಗೌರವವು ಸುತ್ತಲಿನ ದೇಶಗಳ ಜನರ ದೃಷ್ಟಿಯಲ್ಲಿ ಎತ್ತಿಹಿಡಿಯಲ್ಪಟ್ಟಿತು. ಯೆರೂಸಲೇಮಿನ ಜನರ ಹೃದಯ ಪವಿತ್ರವಾದ ಸಂತೋಷದಿಂದ ತುಂಬಿದವು" – ಎಲೆನ್ ಜಿ ವೈಟಮ್ಮನವರ "ಪ್ರವಾದಿಗಳು ಮತ್ತು ಅರಸುಗಳು" ಪುಸ್ತಕದಲ್ಲಿ 361ನೇ ಪುಟ. ಒಂದು ವೇಳೆ ಸನ್ಹೇರೀಬನು ಯೆರೂಸಲೇಮನ್ನು ವಶಪಡಿಸಿಕೊಂಡಿದ್ದರೆ ಅಲ್ಲಿನ ಜನರನ್ನು ಬೇರೆ ಕಡೆಗೆ ಸಾಗಿಸಿ ಅವರು ಇಸ್ರಾಯೇಲ್ಯರಂತೆ ತಮ್ಮ ಗುರುತನ್ನು (ತಮ್ಮ ತನವನ್ನು) ಕಳೆದುಕೊಳ್ಳುವ ಹಾಗೆ ಮಾಡಿರುತ್ತಿದ್ದನು. ಒಂದು ದೃಷ್ಟಿಕೋನದಿಂದ ನೋಡುವುದಾದರೆ ಮೆಸ್ಸೀಯನು ಯೆಹೂದ ಕುಲದಿಂದ ಹುಟ್ಟಿಬರುವುದಕ್ಕೆ ಯೆಹೂದ್ಯ ಜನಾಂಗವೇ ಉಳಿದಿರುತ್ತಿರಲಿಲ್ಲ. ಕಥೆಯು ಅಲ್ಲಿಗೆ ಸಮಾಪ್ತಿಯಾಗುತ್ತಿತ್ತು. ಆದರೆ ದೇವರು ನಿರೀಕ್ಷೆಯನ್ನು ಜೀವಂತವಾಗಿ ಇರಿಸಿದನು. ಸತ್ಯವೇದವನ್ನಾಗಲೀ ಸತ್ಯವೇದ ದೇವರನ್ನಾಗಲೀ ಇನ್ನೂ ನಂಬದಿರುವ ವ್ಯಕ್ತಿಯು "ಅಶ್ಶೂರ ಸೈನಿಕರು ತಾವು ಹೇಗೆ ಮಾಡಲ್ಪಟ್ಟರೋ ಹಾಗೆ ಇದ್ದವರು ಇಂಥವರು ಹೀಗೆ ಸಾಮೂಹಿಕವಾಗಿ ಕೊಲ್ಲಲ್ಪಡುವುದು ನ್ಯಾಯವೇ ಎಂಬ ಪ್ರಶ್ನೆಯನ್ನು ಕೇಳಿದರೆ ನೀವು ಏನು ಹೇಳುವಿರಿ? ದೇವರ ಕೃತ್ಯವನ್ನು ಇಲ್ಲಿ ಹೇಗೆ ಅರ್ಥಮಾಡಿಕೊಳ್ಳುವಿರಿ?

**ಗುರುವಾರ** **ಫೆಬ್ರವರಿ 11**

## ರೋಗದಲ್ಲಿ ಬಿದ್ದಿರುವಾಗ ಮತ್ತು ಸಂಪತ್ತಿನಲ್ಲಿ ಮುಳುಗಿರುವಾಗ (ಯೆಶಾಯ 38,39)

ಯೆಶಾಯ 38 ಮತ್ತು 39ನೇ ಅಧ್ಯಾಯದ ಘಟನೆಗಳು (2 ಅರಸು 20) ಸನ್ಹೇರೀಬನ ಕೈಯಿಂದ ಹಿಜ್ಕೀಯನು ಬಿಡುಗಡೆ ಹೊಂದಿದ ಸಮಯದಲ್ಲಿ ನಡೆದವು, ಯೆಶಾಯ 37ನೇ (2 ಅರಸುಗಳು 19ರನ್ನು ಸಹಾ ನೋಡಿರಿ). ಅಧ್ಯಾಯದಲ್ಲಿ ಅದು ಇನ್ನೂ ಘಟಿಸಿಲ್ಲವೆಂಬಂತೆ ವಿವರಿಸಲಾಗಿದೆ. ಯಾಕೆಂದರೆ

ಯೆಶಾಯ 38:5,6 ಮತ್ತು 2 ಅರಸುಗಳು20:6 ವಾಕ್ಯಗಳು ಯೆಹೂದ್ಯರು ಇನ್ನೂ ಅಶ್ಶೂರರ ಬೆದರಿಕೆಯನ್ನು ಎದುರಿಸುತ್ತಿದ್ದವು ಎಂದು ತಿಳಿಸುತ್ತವೆ.

ಸೈತಾನನು ಹಿಜ್ಕೀಯನಿಗೆ ಮರಣವನ್ನೂ ಯೆರೂಸಲೇಮಿಗೆ ನಾಶನವನ್ನೂ ಒಟ್ಟಾಗಿ ತರಬೇಕೆಂದು ದೃಢಪಡಿಸಿಕೊಂಡಿದ್ದನು. ಒಂದುವೇಳೆ ಹಿಜ್ಕೀಯನು ದಾರಿ ಬಿಟ್ಟುಹೋಗಿದ್ದರೆ ಆತನು ಮಾಡಿದ ಸುಧಾರಣೆಗಳು ಆಗುತ್ತಿರಲಿಲ್ಲ ಮತ್ತು ಯೆರೂಸಲೇಮಿನ ಪತನ ಬಹಳ ಸುಲಭವಾಗಿ ಆಗಿಬಿಡುತ್ತಿತ್ತು ಎನ್ನುವುದರಲ್ಲಿ ಸಂಶಯವೇ ಇರುವುದಿಲ್ಲ. ಎಸ್.ಡಿ.ಎ. ಬೈಬಲ್ ಕಾಮೆಂಟರಿ, 4ನೇ ಸಂಪುಟ, 240ನೇ ಪುಟ.

ದೇವಜನರಿಗೆ ಉತ್ತಮ ನಾಯಕತ್ವ ಎಷ್ಟು ಮುಖ್ಯವಾದುದು ಎಂಬುದರ ಬಗ್ಗೆ ಮೇಲಿನ ಉಲ್ಲೇಖವು ನಮಗೆ ಏನು ಹೇಳುತ್ತದೆ?

ಹಿಜ್ಕೀಯನಿಗೆ ಅವನ ನಂಬಿಕೆಯನ್ನು ದೃಢಪಡಿಸಿಕೊಳ್ಳುವಂತೆ ದೇವರು ಅವನಿಗೆ ಯಾವ ಗುರುತನ್ನು ಕೊಟ್ಟನು? (2 ಅರಸುಗಳು 20:8–10 ಮತ್ತು ಯೆಶಾಯ 38:6–8).

ದೇವರು ಕೊಡುವ ಗುರುತನ್ನು ತಿರಸ್ಕಾರ ಮಾಡಿದುದರಿಂದ ಅಹಾಜನಿಗೆ ಅಶ್ಶೂರರ ದೆಸೆಯಿಂದ ತೊಂದರೆ ಉಂಟಾಗುವ ಘಟನೆಗಳು ಸಾಲು ಸಾಲಾಗಿ ನಡೆದವು. ಆದರೆ ದೇವರು ಅವನ ತಂದೆಯಿಂದ ಯಹೂದಕ್ಕೆ ಉಂಟಾದ ಬಿಕ್ಕಟ್ಟನ್ನು ಪರಿಹರಿಸಲು ಹಿಜ್ಕೀಯನು ಬಲಗೊಳ್ಳುವುದಕ್ಕಾಗಿ ಆತನು ದೇವರಿಗೆ ಒಂದು ಗುರುತನ್ನು ಕೇಳಿದನು (2 ಅರಸುಗಳು 20:8). ಹೌದು ಸೂರ್ಯನ ಇಳಿತರದಿಂದ ಸೋಪಾನ ಪಂಕ್ತಿಯ ನೆರಳು ಹತ್ತು ಮೆಟ್ಟಲು ಹಿಂದೆ ಸರಿಯುವಂತೆ ಮಾಡಲು ಒಂದು ಅದ್ಭುತವೇ ನಡೆಯಬೇಕಾಗಿತ್ತು.

ಬ್ಯಾಬಿಲೋನಿನ ಖಗೋಳ ಶಾಸ್ತ್ರಜ್ಞರು ಆಕಾಶಕಾಯಗಳ ಚಲನವಲನಗಳನ್ನು ಅಧ್ಯಯನ ಮಾಡಿ ನಿಖರವಾಗಿ ದಾಖಲಿಸಿಕೊಳ್ಳುತ್ತಿದ್ದರು. ಹಾಗಾಗಿ ಅವರು ಯಹೋವನು ಮಾಡಿದ ಅದ್ಭುತವನ್ನು ಸೂರ್ಯನ ವಿಚಿತ್ರ ಚಲನೆಯನ್ನು ಗಮನಿಸಿದರು ಮತ್ತು ಏನಾಗಿರಬಹುದೆಂದು ವಿಸ್ಮಯಪಟ್ಟರು. ಈ ಸಂದರ್ಭದಲ್ಲಿ ಮೆರೋದಕಬಲದಾನನು ಯಹೂದ ದೇಶಕ್ಕೆ ರಾಯಭಾರಿಗಳನ್ನು ಕಳುಹಿಸಿದಾಗ

ಬ್ಯಾಬಿಲೋನಿನ ಜನರು ಹಿಜ್ಕೀಯನ ಸ್ವಸ್ಥತೆಗೂ ಅದ್ಭುತವಾದ ಗುರುತಿಗೂ ಇರುವ ಸಂಬಂಧವನ್ನು ತಿಳಿದುಕೊಂಡರು.

ದೇವರು ಯಾಕೆ ಈ ನಿರ್ದಿಷ್ಟವಾದ ಗುರುತನ್ನು ಆರಿಸಿಕೊಂಡನು ಎಂಬುದು ನಮಗೆ ಈವಾಗ ತಿಳಿಯಿತು. ಮುಂದಿನ ಕಾಲದಲ್ಲಿ (ನಂತರದಲ್ಲಿ) ನಕ್ಷತ್ರದಿಂದ ಮೂಡಣ ದೇಶದ ಜೋಯಿಸರು ಬೆತ್ಲೆಹೇಮಿಗೆ ಬರುವಂತೆ ಮಾಡಲು ಆತನು ಸೂರ್ಯನ ಸ್ಥಾನ ಪಲಟವನ್ನು ಉಪಯೋಗಿಸಿ ಬ್ಯಾಬಿಲೋನಿನ ದೂತರನ್ನು ಯಹೂದಕ್ಕೆ ಕರತಂದನು. ಇದು ಸತ್ಯದೇವರ ಬಗ್ಗೆ ಅರಿಯಲು ಒಂದು ವಿಶಿಷ್ಟವಾದ ಅವಕಾಶವನ್ನು ಒದಗಿಸಿಕೊಟ್ಟಿತ್ತು. ಮೆರೋದಕಬಲದಾನನು ತನ್ನ ಜೀವನ ಪರ್ಯಂತ ಅಶ್ಯೂರರಿಂದ ಕಳೆದುಕೊಂಡ ಸ್ವಾತಂತ್ರ್ಯವನ್ನು ಮರಳಿ ಅವರಿಂದ ಪಡೆದುಕೊಳ್ಳಲು ಹವಣಿಸಿದನು. ತನ್ನ ಉದ್ದೇಶವನ್ನು ಹಿಜ್ಕೀಯನಿಗೆ ಅರುಹಲು ಮತ್ತು ಅವನಿಗೆ ಸಮರ್ಥವಾದ ಮೈತ್ರಿಕೂಟದ ಅವಶ್ಯಕತೆಯನ್ನು ತಿಳಿಸಲು ಅವನ ಹತ್ತಿರಕ್ಕೆ ತನ್ನ ರಾಯಭಾರಿಗಳನ್ನು ಕಳುಹಿಸಿದನು. ಹಿಜ್ಕೀಯನ ಬಿನ್ನಹಕ್ಕೆ ಸೂರ್ಯನೇ ಸರಿಯುವುದಾದರೆ ಅಶ್ಯೂರರಿಗೆ ಆತನು ತಕ್ಕುದುದನ್ನೇ ಮಾಡಬಲ್ಲನು ಅಲ್ಲವೇ?

ದೇವರನ್ನು ಮಹಿಮೆಪಡಿಸಬಹುದಾದ ನಂಬಲಸಾಧ್ಯವಾದ ಬ್ಯಾಬಿಲೋನಿಯರು ಅವನ ಕಡೆಗೆ ಬರುವ ಒಂದು ಅವಕಾಶವನ್ನು ಹಿಜ್ಕೀಯನು ಹೇಗೆ ಕಳೆದುಕೊಂಡನು? ಅದರ ಫಲಿತಾಂಶವೇನು? (ಯೆಶಾಯ 39). ಹಿಜ್ಕೀಯನು ದೇವರಿಗೆ ಸಾಕ್ಷಿಯಾಗಿರುವ ಬದಲು ತನ್ನ ಸ್ವಂತ ಮಹಿಮೆಯನ್ನು ಅವರ ಮುಂದೆ ಪ್ರದರ್ಶಿಸಿದನು. ಇದರಲ್ಲಿ ನಮಗೆ ಯಾವ ಬುದ್ಧಿಪಾಠವಿದೆ?

**ಶುಕ್ರವಾರ** **ಫೆಬ್ರವರಿ 12**

**ಹೆಚ್ಚಿನ ಚಿಂತನೆಗಾಗಿ : "ದೇವರ ನೇರವಾದ ಮಧ್ಯಸ್ತಿಕೆಯಿಂದ ಮಾತ್ರ ಸೋಪಾನ ಪಂಕ್ತಿಯ ನೆರಳು ಹತ್ತು ಮೆಟ್ಟಿಲುಗಳು ಹಿಂದಕ್ಕೆ ಸರಿಯಲು ಸಾಧ್ಯವಾಯ್ತು. ಇದನ್ನು ತಾನೇ ದೇವರು ಹಿಜ್ಕೀಯನ ಪ್ರಾರ್ಥನೆಯನ್ನು ಕೇಳಿದುದಕ್ಕೆ ಗುರುತಾಗಿ ಕೊಟ್ಟನು. ಅದೇ ಪ್ರಕಾರವಾಗಿ ಪ್ರವಾದಿಯು ದೇವರಿಗೆ ಮೊರೆಯಿಟ್ಟನು ಅದಕ್ಕೆ ದೇವರು ನೆರಳು ಹತ್ತು ಮೆಟ್ಲು ಹಿಂದೆ ಸರಿಯುವ ಹಾಗೆ ಮಾಡಿದನು"** ಎಲೆನ್

ಜಿ ವೈಟಮ್ಮನವರ ಪ್ರವಾದಿಗಳು ಮತ್ತು ಅರಸರು" ಎಂಬ ಪುಸ್ತಕದಲ್ಲಿ 342ನೇ ಪುಟ.

ದೂರದೇಶದಿಂದ ಯೆರೂಸಲೇಮಿಗೆ ಬಂದಿದ್ದ ಸಂದರ್ಶಕರು ಹಿಜ್ಕೀಯನಿಗೆ ಅವನ ದೇವರನ್ನು ಎತ್ತಿಹಿಡಿಯಲು ಒಂದು ಒಳ್ಳೆಯ ಅವಕಾಶವನ್ನು ನೀಡಿದ್ದರು. ದೇವರು ಆತನಿಗೆ ಮಾಡಿದ ಉಪಕಾರವನ್ನು ಅದ್ಭುತವನ್ನು ಅವರಿಗೆ ಹೇಳಿ ದೇವರ ಹೆಸರನ್ನು ಘನಪಡಿಸುವುದು ಅವನಿಗೆ ಎಷ್ಟು ಸುಲಭವಾಗಿತ್ತು!

"ಆದರೆ ಗರ್ವ ಮತ್ತು ಅಹಂಕಾರ ಅವನ ಹೃದಯವನ್ನು ಆಕ್ರಮಿಸಿಕೊಂಡವು. ತನ್ನನ್ನು ಹೆಚ್ಚಿಸಿಕೊಳ್ಳುವ ಸಲುವಾಗಿ ತನ್ನ ಜನರನ್ನು ಸಂಪದ್ಭರಿತರನ್ನಾಗಿ ಮಾಡಲು ಸಂಗ್ರಹಿಸಿದ್ದ ಎಲ್ಲಾ ವಸ್ತುಗಳನ್ನು (ಭಂಡಾರವನ್ನು) ಆಶೆಯುಳ್ಳ ಕಣ್ಣುಗಳಿಗೆ ಒಡ್ಡಿದನು. ರಾಜನು ತನ್ನ ಭಂಡಾರದಲ್ಲಿದ್ದ ಅಮೂಲ್ಯವಸ್ತುಗಳನ್ನು ಬೆಳ್ಳಿ ಬಂಗಾರದ ಮತ್ತು ಸಾಂಬಾರ ಪದಾರ್ಥಗಳು, ಪರಿಮಳ ತೈಲ ಮತ್ತು ಸಮಸ್ತ ಶಸ್ತ್ರಾಗಾರವನ್ನು ತೋರಿಸಿದನು (ಯೆಶಾಯ 39:2). ದೇವರನ್ನು ಘನಪಡಿಸುವುದಕ್ಕಾಗಿ ಇದನ್ನು ಮಾಡದೆ ತನ್ನನ್ನು ತಾನು ಅನ್ಯದೇಶದ ಪ್ರಭುಗಳ ಮುಂದೆ ಹೆಚ್ಚಿಸಿಕೊಳ್ಳಲು ಮಾಡಿದನು" – ಪ್ರವಾದಿಗಳು ಮತ್ತು ಅರಸರು ಪುಸ್ತಕದಲ್ಲಿ 344 ಮತ್ತು 34ನೇ ಪುಟಗಳು.

## ಚರ್ಚಿಸಬೇಕಾದ ಪ್ರಶ್ನೆಗಳು

1. ಸೈತಾನನು ಹೇಗೆ ಅಶ್ಶೂರರ ರಬ್ಬಾಕೆಯನ್ನು ಹೋಲುತ್ತಾನೆ? ನೀನು ಪಾಪವನ್ನು ಮಾಡಿದ್ದೀಯ ಎಂಬುದಾಗಿ ಹೇಳುವಾಗ ಸೈತಾನನು ಸತ್ಯವನ್ನು ನುಡಿದನೆ (ಜೆಕರ್ಯ 3:1)? ದೇವರು ಅದಕ್ಕೆ ಹೇಗೆ ಪ್ರತಿಕ್ರಿಯಿಸಿದನು? (ಜೆಕರ್ಯ 3:2–5ನ್ನು ನೋಡಿರಿ). ಈ ಆರೋಪಗಳಿಗೆ ವಿರುದ್ಧವಾಗಿ ನಮಗಿರುವ ಒಂದೇ ನಿರೀಕ್ಷೆ ಏನು?

2. ನೀವು ಕ್ಷಮಿಸಲ್ಪಟ್ಟಾಗ ಸೈತಾನನು ನಿಮ್ಮ ಮೇಲೆ ಆರೋಪಿಸುವುದನ್ನು ನಿಲ್ಲಿಸುತ್ತಾನೆಯೆ? (ಪ್ರಕ 12:10ನ್ನು ನೋಡಿರಿ). ನೀವು ಕ್ಷಮಿಸಲ್ಪಟ್ಟ ಮೇಲೆ ಸೈತಾನನು ನಿಮ್ಮನ್ನು ನೀನು ಪಾಪ ಮಾಡಿರುವುದರಿಂದ ನನಗೆ ಸೇರಬೇಕು ಎಂದು ಹೇಳುವಾಗ ಆತನು ನಿಮ್ಮ ಮೇಲೆ ಮಾಡುವ

ಆರೋಪವು ಯಾವ ರೀತಿಯದು? (ಧ.ಕಾಂಡ 19:16–21ನ್ನು ನೋಡಿರಿ – ಸುಳ್ಳು ಹೇಳುವ ಮತ್ತು ಮತ್ಸರ ಪೂರಿತವಾದ ಸಾಕ್ಷಿಯು ವಿಷಯದಲ್ಲಿರುವ ಧರ್ಮನಿಯಮಗಳು).

**ಸಾರಾಂಶ:** ನಂಬಿಗಸ್ತನಾದ ಹಿಜ್ಕೀಯನ ಮೊರೆಗೆ ಪ್ರತಿಯಾಗಿ ದೇವರು ತನ್ನ ಜನರನ್ನು ರಕ್ಷಿಸಿ ತಾನು ಲೋಕದ ಗತಿ ಸ್ಥಾಪನೆ ಮಾಡುವ ಸರ್ವಶಕ್ತನಾದ ದೇವರಾಗಿದ್ದಾನೆ ಎಂಬುದನ್ನು ತೋರಿಸಿಕೊಟ್ಟನು. ತನ್ನ ಜನರನ್ನು ನಾಶಪಡಿಸುವವರನ್ನು ನಾಶಮಾಡುವುದು ಮಾತ್ರವಲ್ಲ ಆತನು ಇತರರಿಗೂ ತನ್ನ ಜನರಾಗುವ ಅವಕಾಶವನ್ನು ಒದಗಿಸಿಕೊಡುತ್ತಾನೆ. ಏನೇ ಆಗಲಿ ಬ್ಯಾಬಿಲೋನಿಯನ್ನರು ಸಹ ತನ್ನ ಜನರಾಗಬೇಕೆಂಬುದು ಆತನ ಚಿತ್ತವಾಗಿದೆ.